# ಚಾರ್‌ಧಾಮ್ ಯಾತ್ರೆ

**ವಿರಾಜ್ ಮಂಗಲಗಿ**

ತೀರ್ಥಯಾತ್ರೆಗಳಲ್ಲಿ ಅತ್ಯಂತ ಪ್ರಸಿದ್ಧವೂ ಪುಣ್ಯಕರವೂ ಆದ ಯಾತ್ರೆಯೇ 'ಚಾರ್‌ಧಾಮ್ ಯಾತ್ರೆ'. ಈ ಯಾತ್ರೆಯು ಹಿಮಾಲಯದ ಉನ್ನತ ಶಿಖರಗಳ ನಡುವೆ ಇರುವುದರಿಂದ ಪ್ರಕೃತಿ ಮತ್ತು ಭಗವಂತನ ಅದ್ಭುತ ಲೀಲಾದರ್ಶನ ಕೂಡ ಇಲ್ಲಿ ಕಾಣಲು ಸಿಗುವುದು. ತಮ್ಮ ಯಾತ್ರೆಯ ಅನುಭವಗಳನ್ನು ಇಲ್ಲಿ ಹಂಚಿಕೊಂಡಿರುವ ಲೇಖಕರು ಗುಲ್ಬರ್ಗಾ ನಿವಾಸಿಗಳು. ರಾಮಕೃಷ್ಣ ಆಶ್ರಮದ ಭಕ್ತರೂ ಆಗಿರುವ ಅವರು ಹಲವಾರು ಬಗೆಯ ಸೇವಾಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

**ಭಾ**ರತ ದೇಶ ಕೇವಲ ಭೌಗೋಳಿಕವಾದ ಭೂಪ್ರದೇಶವಲ್ಲ. ಇದೊಂದು ಪುಣ್ಯಭೂಮಿ, ತಪೋಭೂಮಿ, ದೇವಭೂಮಿ, ವೇದ ಭೂಮಿ, ಕರ್ಮಭೂಮಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇಲ್ಲಿನ ಪ್ರತಿಯೊಂದು ಮಣ್ಣಿನ ಕಣಕಣವೂ, ಬೀಸುವ ಗಾಳಿಯೂ, ಹರಿಯುವ ನೀರೂ ಅತ್ಯಂತ ಪವಿತ್ರವಾಗಿವೆ. ನಮ್ಮ ದೇಶದುದ್ದಗಲಕ್ಕೂ ಅಸಂಖ್ಯ ತೀರ್ಥಕ್ಷೇತ್ರಗಳು, ಸಾಗರಗಳು, ನದಿಗಳು, ಪರ್ವತಗಳು, ಗಿರಿ-ಗುಹೆ-ಕಂದರಗಳು, ಅರಣ್ಯ ಪ್ರದೇಶಗಳು, ಸಂತ-ಮಹಾತ್ಮರು ತಪೋಗೈದ ಸ್ಥಳಗಳು... ವಿಶ್ವದಾದ್ಯಂತ ಅನೇಕ ಯಾತ್ರಿಕರನ್ನು ತನ್ನೆಡೆಗೆ ಆಕರ್ಷಿಸಿ ಆಧ್ಯಾತ್ಮಿಕ ಔನ್ನತ್ಯವನ್ನು ಸಾಧಿಸುವಲ್ಲಿ ಅತ್ಯಂತ ಸಹಾಯಕಾರಿಯಾಗಿವೆ.

ಭಾರತದ ಯಾವುದೇ ಒಂದು ಹಳ್ಳಿಯನ್ನು ತೆಗೆದುಕೊಂಡರೂ ಅಲ್ಲಿ ಸರ್ವಸಂಗ ಪರಿತ್ಯಾಗಿಯಾದ ಸಂನ್ಯಾಸಿಯೋರ್ವನು, ಯೋಗಿಯೊಬ್ಬನು ತಪಸ್ಸನ್ನಾಚರಿಸಿ, ಆ ಪ್ರದೇಶವನ್ನು ಆಧ್ಯಾತ್ಮಿಕವಾಗಿ ಜಾಗೃತಗೊಳಿಸಿದ ಘಟನೆಗಳು ನಮಗೆ ತಿಳಿದುಬರುತ್ತದೆ. ಕಾಲಕ್ರಮದಲ್ಲಿ ಆ ತಪೋಭೂಮಿಯೇ ಸ್ಥಳೀಯರ ಶ್ರದ್ಧಾಕೇಂದ್ರವಾಗಿ ಅದೊಂದು ತೀರ್ಥಕ್ಷೇತ್ರವಾಗಿ ಪರಿಗಣಿತವಾಗುತ್ತದೆ. ಪ್ರತಿಯೊಂದು ಹಳ್ಳಿಯ ಮಾತೇ ಹೀಗಿರುವಾಗ ಇನ್ನೂ ಯುಗ-ಯುಗಗಳಿಂದ ಅಸಂಖ್ಯ ಋಷಿ-ಮುನಿಗಳು ಆ ಹಿಮಾಲಯದ ತಪ್ಪಲಿನಲ್ಲಿ ಸಾಧನಾನಿರತರಾಗಿ, ಅಲ್ಲಿನ ಪ್ರಕೃತಿ ಸೌಂದರ್ಯದಲ್ಲಿ ದೈವತ್ವವು ದೇದೀಪ್ಯಮಾನವಾಗಿ ಪ್ರಜ್ವಲಿಸುತ್ತಿರುವುದನ್ನು ನಮ್ಮಿಂದ ಊಹಿಸಿಕೊಳ್ಳುವುದೂ ಅಸಾಧ್ಯವಾದ ಮಾತು! ಆ ಹಿಮಾಲಯ ಪರ್ವತಗಳಲ್ಲಿ ಘನೀಭೂತವಾದ ಆಧ್ಯಾತ್ಮಿಕತೆಯನ್ನು ನೇರ ವೀಕ್ಷಿಸಿದಾಗ ಮಾತ್ರ ಅದು ನಮ್ಮ ಅನುಭವಕ್ಕೆ ಬರುವಂಥದ್ದು. ಧನ್ಯ ಆ ಹಿಮಾಲಯ; ಧನ್ಯ ನಮ್ಮ ಈ ಭಾರತ ಭೂಮಿ!

ಭರತಖಂಡದ ಎಲ್ಲೆಯನ್ನು ವಿಷ್ಣುಪುರಾಣವು ಹೀಗೆ ಹೇಳಿದೆ;

**ಉತ್ತರಂ ಯತ್ ಸಮುದ್ರಸ್ಯ ಹಿಮಾದ್ರೇಶ್ಚೈವ ದಕ್ಷಿಣಂ**
**ವರ್ಷಂ ತದ್‌ಭಾರತಂ ನಾಮ ಭಾರತೀ ಯತ್ರ ಸಂತತಿಃ ॥**

'ಉತ್ತರದ ಹಿಮಾಲಯ ಶಿಖರಗಳಿಂದ ದಕ್ಷಿಣದ ಸಮುದ್ರ ತೀರದವರೆಗೂ ಆವರಿಲಸ್ಪಟ್ಟ ಪ್ರದೇಶವನ್ನು ಭಾರತವರ್ಷ ಎಂಬ ಹೆಸರಿನಿಂದಲೂ, ಆ ಭೂಮಿ ತಾಯಿಯ ಸಂತತಿಯನ್ನು ಭಾರತೀಯರು ಎಂದು ಕರೆಯುತ್ತಾರೆ.'

ಸ್ವಾಮಿ ವಿವೇಕಾನಂದರು ಮದ್ರಾಸ್‌ನಲ್ಲಿದ್ದಾಗ ಅವರ ಅಲೌಕಿಕ ವ್ಯಕ್ತಿತ್ವಕ್ಕೆ ಮಾರುಹೋಗಿ ಅನೇಕ ಉತ್ಸಾಹಿ ಯುವಕರು, ಧಾರ್ಮಿಕ ಮುಖಂಡರು ಅವರ ದರ್ಶನಕ್ಕೆ ಬರುತ್ತಿದ್ದರು. ಆ ಯುವಕರು ಅವರೊಡನೆ ಅನೇಕ ವಿಷಯಗಳ ಕುರಿತಾಗಿ ಚರ್ಚಿಸುತ್ತಿದ್ದರು. ನಂತರ ಆ ಸಂದರ್ಶಕರು ಸ್ವಾಮೀಜಿಯವರ ಆಳವಾದ ಜ್ಞಾನ, ಅದ್ವೈತದ ಪರಕಾಷ್ಠೆಯನ್ನು ಕಂಡು ಸ್ತಂಭೀಭೂತರಾದರು.

ಒಮ್ಮೆ ಸ್ವಾಮೀಜಿ ಭಕ್ತಿಭಾವೋನ್ಮತ್ತರಾಗಿದ್ದುದನ್ನು ಕಂಡು ಕೆಲವು ಸಂದರ್ಶಕರು ಆಶ್ಚರ್ಯಚಕಿತರಾದರು. ಅವರಿಗೆ ಸ್ವಾಮೀಜಿಯವರ ಈ ಭಾವ ತೀರ ಹೊಸದು. ಆದ್ದರಿಂದ ಅವರಲ್ಲೊಬ್ಬ ಸ್ವಾಮೀಜಿಯವರನ್ನೇ ದೃಷ್ಟಿಯಲ್ಲಿಟ್ಟುಕೊಂಡು ಕೇಳಿದ, ''ಸ್ವಾಮೀಜಿ ಹಿಂದೂಗಳಿಗೆ ಅದ್ಭುತವಾದ ವೇದಾಂತ ತತ್ತ್ವಗಳ ಹಿನ್ನೆಲೆಯಿದ್ದರೂ ಅವರು ಮೂರ್ತಿಪೂಜಕರಾಗಿಯೇ ಉಳಿದಿದ್ದಾರಲ್ಲ ಏಕೆ?'' ಸ್ವಾಮೀಜಿ ಗಂಭೀರ ಭಾವದಿಂದ ಅವನನ್ನೇ ದಿಟ್ಟಿಸುತ್ತ ಉತ್ತರಿಸಿದರು; ''ಏಕೆಂದರೆ ನಮ್ಮ ಮುಂದೆ ಹಿಮಾಲಯ ಪರ್ವತವಿದೆ!''

ಸ್ವಾಮೀಜಿಯ ಈ ಮಾತಿನ ಅರ್ಥವೇನು? ಅತ್ಯಂತ ಗಾಂಭೀರ್ಯದಿಂದ ಆಗಸದೆತ್ತರಕ್ಕೆ ನಿಂತಿರುವ ಭವ್ಯಸುಂದರ ಹಿಮಾಲಯ ದರ್ಶನ ಮಾಡಿದವರಿಗೆ ಇದರ ಮರ್ಮ ಅರಿವಾಗುತ್ತದೆ. ಸ್ಫಟಿಕದಂತೆ ಶುಭ್ರವಾದ ಹಿಮಾಲಯ ಪರ್ವತಗಳು, ಅತಿ ಎತ್ತರದಿಂದ ಕೆಳಗೆ ಧುಮುಕುತ್ತಿರುವ ಜಲಪಾತಗಳ ಭೋರ್ಗರೆತ, ಜುಳು ಜುಳು ನಿನಾದಗೈಯುತ್ತ ಹರಿಯುತ್ತಿರುವ ತಿಳಿನೀರಿನ ಝರಿಗಳು, ಆ ಸ್ತಬ್ಧ-ನೀರವ-ಮೌನವಾದ ವಾತಾವರಣ, ಹಚ್ಚ ಹಸಿರಾಗಿ ಕಂಗೊಳಿಸುತ್ತಿರುವ ವನಸಿರಿ-ಇವುಗಳಿಂದ ಕೂಡಿದ ಪ್ರಕೃತಿ ದೇವಿಯ ಮಡಿಲಲ್ಲಿರುವವರು ಅದಕ್ಕೆ ಬಾಗಿ ನಮಿಸದಿರಲು ಸಾಧ್ಯವೇ ಇಲ್ಲ. ಆದ್ದರಿಂದಲೇ ಭಾರತೀಯರು ಅತ್ಯುನ್ನತ ವೇದಾಂತ ತತ್ತ್ವಗಳನ್ನು ಅರಿತವರಾದರೂ ಬಾಹ್ಯಪೂಜೆಯನ್ನು ಬಿಡಲಾರರು ಎಂಬುದು ಸ್ವಾಮೀಜಿಯವರ ಮಾತಿನ ಅಂತರಾರ್ಥ.

ಭಗವಾನ್ ಶ್ರೀಕೃಷ್ಣನು ಗೀತೆಯಲ್ಲಿ 'ಪರ್ವತಗಳಲ್ಲೆಲ್ಲಾ ನಾನು ಹಿಮಾಲಯ' ಎಂದು ಹೇಳುತ್ತಾನೆ. ಪ್ರಾಚೀನ ಕಾಲದಿಂಲೂ ಅನೇಕ ಋಷಿಗಳು ಈ ವಿಸ್ತಾರವಾದ ಮಹೋನ್ನತವಾದ ಪರ್ವತಸ್ತೋಮದ ಶಿಖರಗಳಲ್ಲಿ, ಅದರ ಗುಹೆಗಳಲ್ಲಿ ಸತ್ಯವನ್ನು ಸಾಕ್ಷಾತ್ಕರಿಸಿಕೊಂಡಿದ್ದಾರೆ. ಸ್ವಾಮಿ ವಿವೇಕಾನಂದರು ಹಾಗೂ ಅವರ ಸೋದರ ಸಂನ್ಯಾಸಿಗಳಾದ ಸ್ವಾಮಿ ಅಖಂಡಾನಂದರು, ಸ್ವಾಮಿ

ಶಿವಾನಂದರು, ಸ್ವಾಮಿ ತುರೀಯಾನಂದರು, ಸ್ವಾಮಿ ಪ್ರೇಮಾನಂದರು ಹಾಗೂ ಸ್ವಾಮಿ ಶಾರದಾನಂದರು ಆ ಹಿಮಾಲಯದಲ್ಲಿ ತೀವ್ರವಾದ ತಪಸ್ಸನ್ನಾಚರಿಸಿ ಭಗವದನುಭೂತಿಯನ್ನು ಪಡೆದಿದ್ದಾರೆ. ಈ ಹಿಮಾಲಯಕ್ಕೂ ಆಧ್ಯಾತ್ಮಿಕ ಸಾಧಕರಿಗೂ ಒಂದು ಅನ್ಯೋನ್ಯ ಸಂಬಂಧವಿದೆ.

ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಅನಾದಿ ಕಾಲದಿಂದಲೂ ತೀರ್ಥಕ್ಷೇತ್ರಗಳ ಪರ್ಯಟನೆ ಆಧ್ಯಾತ್ಮಿಕ ಸಾಧನೆಯ ಒಂದು ಅವಿಭಾಜ್ಯ ಅಂಗವಾಗಿದೆ. ''ತೀರ್ಥಕ್ಷೇತ್ರಗಳಲ್ಲಿ ಭಗವಂತನ ವಿಶೇಷ ಸಾನ್ನಿಧ್ಯವಿರುತ್ತದೆ'' ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ಹಿಮವಂತನ ಮಡಿಲಲ್ಲಿರುವ ಅನೇಕ ತೀರ್ಥಕ್ಷೇತ್ರಗಳನ್ನು ದರ್ಶಿಸಿದರೂ, ಚಾರ್‌ಧಾಮ್ ಯಾತ್ರೆ ಕೈಗೊಂಡಿರಲಿಲ್ಲ. ಮೂರ್ನಾಲ್ಕು ವರ್ಷಗಳಿಂದ ಚಾರ್‌ಧಾಮ್ ಯಾತ್ರೆಗೆ ಹೋಗುವ ಪ್ರಯತ್ನ ಮಾಡುತ್ತಿದ್ದರೂ ಕಾರಣಾಂತರಗಳಿಂದ ಸಾಧ್ಯವಾಗಿರಲಿಲ್ಲ. ದಿವ್ಯತ್ರಯರ ಕೃಪೆಯಿಂದ ಈ ವರ್ಷ ರಾಮಕೃಷ್ಣ ಆಶ್ರಮದ ಪೂಜ್ಯ ಸ್ವಾಮೀಜಿಯವರೊಡನೆ ಚಾರ್‌ಧಾಮ್ ಯಾತ್ರೆ ಕೈಗೊಳ್ಳುವ ಅವಕಾಶ ಲಭಿಸಿತು. ಮೇ ೧೮ರಂದು ಬೆಂಗಳೂರಿನಿಂದ ಬೆಳಿಗ್ಗೆ ದೆಹಲಿಗೆ ತಲುಪಿದೆವು. ದೆಹಲಿ, ಡೆಹ್ರಾಡೂನ್, ಹರಿದ್ವಾರ ಮಾರ್ಗವಾಗಿ ನಮ್ಮ ಚಾರ್‌ಧಾಮ್ ಯಾತ್ರೆ ಪ್ರಾರಂಭವಾಯಿತು.

**ಯಮುನೋತ್ರಿ :** ಸಂಪ್ರದಾಯದ ಪ್ರಕಾರ ಚತುರ್ಧಾಮಗಳಲ್ಲಿ ಮೊದಲು ಯಮುನೋತ್ರಿ, ನಂತರ ಗಂಗೋತ್ರಿ, ಆನಂತರ ಕೇದಾರಗಳನ್ನು ದರ್ಶಿಸಿ, ಕೊನೆಗೆ ಬದರೀನಾಥಕ್ಕೆ ಹೋಗುತ್ತಾರೆ. ನಾವು ಈ ಕ್ರಮಾನುಸಾರವಾಗಿಯೇ ಯಾತ್ರೆ ಮಾಡಿದ್ದೇವೆ.



ದಿನಾಂಕ ೨೪ರಂದು ಬೆಳಿಗ್ಗೆ ನಾನು ಮತ್ತು ೩ ಜನ ಸ್ವಾಮೀಜಿಯವರು ಹರಿದ್ವಾರದ ರಾಮಕೃಷ್ಣ ಮಿಷನ್ ಸೇವಾಶ್ರಮದಿಂದ ಒಂದು ಟ್ಯಾಕ್ಸಿ ಕಾರಿನಲ್ಲಿ ಪ್ರಯಾಣ ಪ್ರಾರಂಭಿಸಿ ಜಾನಕೀಚಟ್ಟಿಯನ್ನು ತಲುಪಿ, ರಾತ್ರಿ ಅಲ್ಲಿಯೇ ಉಳಿದುಕೊಂಡು ಮುಂಜಾನೆ ಯಮನೋತ್ರಿಗೆ ಹೋಗುವ ಯಾತ್ರೆ ಪ್ರಾರಂಭ ಮಾಡಿದೆವು. ಜಾನಕೀಚಟ್ಟಿಯಿಂದ ೬ ಕಿ.ಮೀ. ದೂರದಲ್ಲಿ ಅತ್ಯಂತ ಕಡಿದಾದ, ಎತ್ತರ ಎತ್ತರ ಸಾಗುವ ದುರ್ಗಮವಾದ ರಸ್ತೆಯಲ್ಲಿ ನಡೆದು ಹೋದರೆ ಭಕ್ತಿ ಪ್ರತೀಕವಾದ ಯಮುನೋತ್ರಿ ಧಾಮ ಸಿಗುತ್ತದೆ.

ಯಮುನೋತ್ರಿಯ ದಟ್ಟ ಕಾಡಿನ ಮಧ್ಯೆ ಇರುವ ಒಂದು ಪುಟ್ಟದಾದ ಸುಂದರವಾದ ಸ್ಥಳ. ಯಾತ್ರಿಕರಿಗಾಗಿ ಕೆಲವು ವಸತಿಗೃಹಗಳು, ಅಂಗಡಿಗಳು, ಹೋಟೆಲುಗಳು ಮಾತ್ರ ಇಲ್ಲಿವೆ. ಭಕ್ತಿಭಾವವನ್ನು ಉದ್ದೀಪನಗೊಳಿಸುವ ತಾಯಿ ಯುಮುನೆಯ ಚಿಕ್ಕ ಮಂದಿರವಿದೆ. ಅನತಿ ದೂರದಲ್ಲಿ ಒಂದು ಬೆಟ್ಟದಿಂದ ಕೆಳಗೆ ಧುಮುಕುತ್ತಿರುವ ಯಮುನೆಯ ಧಾರೆಯನ್ನು ನೋಡಬಹುದು. ಯಮುನೆ ನಿಜವಾದ ಉಗಮಸ್ಥಾನ ಇನ್ನೂ ಎತ್ತರದಲ್ಲಿರುವ ಒಂದು ಸರೋವರ. ಸಾಮಾನ್ಯವಾಗಿ ಯಾತ್ರಿಕರು ಅಲ್ಲಿ ಹೋಗುವುದಕ್ಕೆ ಸಾಧ್ಯವೇ ಇಲ್ಲ. ಯಮುನೆ ನಿಧಾನವಾಗಿ ಶಾಂತವಾಗಿ ಹೊಳೆಯ ಪ್ರಮಾಣದಲ್ಲಿ ಹರಿದು ಬರುತ್ತಾಳೆ. ಗಂಗೆಯಂತೆ ಇಲ್ಲಿಯ ನದಿ ಅರ್ಭಟದಿಂದ ಕೂಡಿಲ್ಲ. ಆದರೆ ಯಮುನೆಯ ಬಣ್ಣ ಮಾತ್ರ ಸ್ಫಟಿಕದಂತೆ ಶುಭ್ರವಾದದ್ದು. ಯಮುನಾ ದೇವಿಯ ದೇವಸ್ಥಾನದ ಸನಿಹದಲ್ಲಿಯೇ ಒಂದು ಬಿಸಿನೀರಿನ ಕುಂಡವಿದೆ. ಒಂದು ಕಡೆಯಂತೂ ನೀರು ನಿರಂತರವಾಗಿ ಕುದಿಯುತ್ತಿರುತ್ತದೆ. ಯಾತ್ರಿಕರು ಸ್ವಲ್ಪ ಅಕ್ಕಿಯನ್ನು ಬಟ್ಟೆಯಲ್ಲಿ ಕಟ್ಟಿ ಬಿಸಿ ನೀರಿನಲ್ಲಿ ಮುಳುಗಿಸುತ್ತಾರೆ, ನಿಮಿಷದಲ್ಲಿ ಅದು ಅನ್ನವಾಗುತ್ತದೆ. ಅದನ್ನು ದೇವಿಗೆ ನೈವೇದ್ಯ ಮಾಡಿ ಅದನ್ನು ಪ್ರಸಾದವಾಗಿ ಸ್ವೀಕರಿಸುತ್ತಾರೆ. ತಾಯಿ ಯಮುನೆಗೆ ಭಕ್ತಿಪೂರ್ವಕವಾದ ನಮನಗಳನ್ನು ಸಲ್ಲಿಸಿ, ಸಾಯಂಕಾಲ ಜಾನಕೀಚಟ್ಟಿಯನ್ನು ತಲುಪಿ, ಉತ್ತರಕಾಶಿ ಮಾರ್ಗವಾಗಿ ಗಂಗೋತ್ರಿಯ ಕಡೆ ಪ್ರಮಾಣವನ್ನು ಮುಂದುವರೆಸಿದೆವು.

**ಗಂಗೋತ್ರಿ :** ಗಂಗೆ ಭಾರತದ ಆತ್ಮ. ಭಾರತೀಯ ಸಂಸ್ಕೃತಿಯ ಜೀವಾಳ. ಉತ್ತರ ಕಾಶಿಯಿಂದ ಸುಮಾರು ೮೦ ಕಿ.ಮೀ. ದೂರದಲ್ಲಿ ಪವಿತ್ರವಾದ ಗಂಗೋತ್ರಿ ಧಾಮವಿದೆ. ಗಂಗೆಯು ಹಿಮಾಲಯದ ಅತಿ ಎತ್ತರ ಹಾಗೂ ದುರ್ಗಮವಾದ ಗೋಮುಖವೆಂಬ ಸ್ಥಳದಲ್ಲಿ ಉದ್ಭವಿಸಿ, ಕಿರು ದಾರಿಯ ಮಧ್ಯೆ ಅನೇಕ ಝರಿಗಳ ಮೂಲಕ ಬೆಟ್ಟಗುಡ್ಡಗಳಿಂದಾವೃತವಾದ ಪ್ರದೇಶದಿಂದ ೧೮ ಕಿ.ಮೀ. ಕೆಳಕ್ಕೆ ಸಾಗಿ ಉತ್ತರಾಭಿಮುಖವಾಗಿ ಹರಿಯುತ್ತಾ ಗಂಗೋತ್ರಿಗೆ ಬರುತ್ತಾಳೆ. ಗಂಗೋತ್ರಿ ಎಂದರೆ ಉತ್ತರ ದಿಕ್ಕಿನತ್ತ ಹರಿಯುವ ಗಂಗೆ ಎಂದರ್ಥ. ಒಬ್ಬ ಅನ್ವೇಷಣೆಕಾರರ ಪ್ರಕಾರ ಗೋಮುಖವು 'ಹಸುವಿನ ಮುಖ'ದ ಆಕಾರದಂತಿರುವುದರಿಂದ ಆದಕ್ಕೆ ಆ ಹೆಸರು ಬಂದಿದೆ ಎನ್ನುತ್ತಾರೆ. ಈ ಪ್ರದೇಶವು ಸಮುದ್ರ ಮಟ್ಟದಿಂದ ೩೮೯೨ ಮೀಟರ್(೧೨೮೦೦ ಅಡಿ) ಎತ್ತರದಲ್ಲಿದೆ. ಇಲ್ಲಿಂದ ಇನ್ನೂ ಎತ್ತರವಾದ ಪ್ರದೇಶದಲ್ಲಿ 'ತಪೋವನ' ಎಂಬ ಸ್ಥಳವಿದೆ.

ಉತ್ತರಕಾಶಿಯಿಂದ ಗಂಗೋತ್ರಿಯ ಪ್ರಯಾಣ ಅತ್ಯಂತ ರಮಣೀಯವಾದದ್ದು. ಗಂಗೋತ್ರಿಯ ದಾರಿ ಅಂಕುಡೊಂಕಾಗಿರುವ ವಿಶಾಲವಾದ ರಸ್ತೆ. ಒಂದು ಕಡೆ ಆಕಾಶದೆತ್ತರಕ್ಕೆ ಹರಡಿಕೊಂಡಿರುವ ಪರ್ವತಶ್ರೇಣಿಯ ಸಾಲುಗಳಿದ್ದರೆ, ಇನ್ನೊಂದು ಕಡೆ ಆಳವಾದ ಕಂದರದಲ್ಲಿ ಗಂಗೆಯ ಪ್ರವಾಹ ವಕ್ರವಾಗಿ ಹರಿಯುತ್ತದೆ. ತಾಯಿ ಗಂಗೆಯನ್ನು ಭೂಮಿಗೆ ತರಲು ಭಗೀರಥ ಮಹರ್ಷಿಯು ತಪಸ್ಸು ಮಾಡಿದ ಸ್ಥಳದಲ್ಲಿಯೇ, ಇಂದು ಅಮೃತ ಶಿಲೆಯಿಂದ ನಿರ್ಮಿಸಿದ ಗಂಗಾಮಾತೆಯ ಸುಂದರವಾದ ದೇವಸ್ಥಾನವಿದೆ. ಇದನ್ನು ಜೈಪುರದ ಮಹಾರಾಜ ಕಟ್ಟಿಸಿದ್ದು. ದೇವಾಲಯದ ಗರ್ಭಗೃಹದಲ್ಲಿ ಭಕ್ತಿಭಾವವನ್ನು ಜಾಗೃತಗೊಳಿಸುವ ಗಂಗಾಮಾತೆಯ ಪ್ರತಿಮೆ ಇದೆ. ಬಲಕ್ಕೆ ಯಮುನೆ, ಎಡಕ್ಕೆ ಸರಸ್ವತಿ



ಹಾಗೂ ಎದುರಿನಲ್ಲಿ ಭಗೀರಥನ ಮೂರ್ತಿ ಇದೆ. ಅಕ್ಷಯ ತೃತೀಯದಿಂದ ದೀಪಾವಳಿಯವರೆಗೂ ಮಾತ್ರ ಈ ದೇವಸ್ಥಾನ ತೆಗೆದಿರುತ್ತದೆ. ಇನ್ನುಳಿದ ೬ ತಿಂಗಳು ಕಾಲ ಗಂಗೋತ್ರಿ ಧಾಮವು ವಿಪರೀತವಾದ ಚಳಿ ಹಾಗೂ ಹಿಮಾವೃತದಿಂದಾಗಿ ಪೂರ್ಣವಾಗಿ ಮುಚ್ಚಲ್ಪಡುತ್ತದೆ. ಅನೇಕ ಸಾಧು-ಸಂತರು ವರ್ಷದ ೧೨ ತಿಂಗಳೂ ಈ ನಿರ್ಜನವಾದ ಪ್ರದೇಶದಲ್ಲಿ ಉಳಿದುಕೊಂಡು ಸಾಧನಾ ನಿರತ ರಾಗಿರುತ್ತಾರೆ. ದೀಪಾವಳಿಯ ಸಂದರ್ಭದಲ್ಲಿ ದೇವಾಲಯ ಗರ್ಭ ಮಂದಿರದಲ್ಲಿ ಹಚ್ಚಿಟ್ಟಿದ್ದ ದೀಪವು ಅಕ್ಷಯತೃತೀಯದ ನಂತ ರವೂ ಬೆಳಗುತ್ತಿರುವುದನ್ನು ನಾವು ಗಮನಿಸಬಹುದು. ಅಲ್ಲಿನ ಅರ್ಚಕರು, ''ಈ ದೀಪ ಎಂದಿಗೂ ಆರುವುದೇ ಇಲ್ಲ. ಇದು ಅನಾದಿಕಾಲದಿಂದಲೂ ಬೆಳಗುತ್ತಿರುವ ನಂದಾದೀಪ'' ಎನ್ನುತ್ತಾರೆ.

ದೇವಾಲಯದ ಬಳಿಯಲ್ಲಿ ಗಂಗೆ ಕಣಿವೆಯೊಳಗೆ ಹರಿದು ಹೋಗುವ ಮನೋಹರ ದೃಶ್ಯ ಕಾಣಿಸುತ್ತದೆ. ಇದನ್ನು ವೀಕ್ಷಿಸಿ ದವರಿಗೆ ಗಂಗೆ ಶಿವನ ಜಟೆಯಿಂದ ಹರಿದು ಹೊರಬರುತ್ತಿರುವಂತೆ ಭಾಸವಾಗುತ್ತದೆ. ದೇವಾಲಯದ ಅನತಿ ದೂರದಲ್ಲಿಯೇ ಶುಭ್ರ ವಾದ ಹಿಮಾಚ್ಛಾದಿತ ಬೆಟ್ಟಗಳು, ಎತ್ತರವಾದ ಪೈನ್ ಮರಗಳು, ಹಿಮದಿಂದಾವೃತವಾಗಿ ಭೋರ್ಗರೆಯುತ್ತಿರುವ ಗಂಗೆ, ಅಲ್ಲಿನ ನದಿಯ ದಡದಲ್ಲಿರುವ ಅನೇಕ ಆಶ್ರಮಗಳು ಜ್ಞಾನಪ್ರತೀಕವಾದ ಗಂಗೋತ್ರಿಯ ದೈವೀ ಸೌಂದರ್ಯವನ್ನು ಸಾವಿರಪಟ್ಟು ವೃದ್ಧಿಸಿವೆ.

ಇಂತಹ ಪರಮ ಪಾವನಕರವಾದ ಧಾಮದಲ್ಲಿ ಗಂಗಾ ಮಾತೆಯ ದರ್ಶನ, ಗಂಗೆಯ ಸ್ಪರ್ಶನದಿಂದ ನಮ್ಮ ಹೃನ್ಮನಗಳು ಪುಳಕಿತಗೊಂಡವು.

ಶ್ರೀರಾಮಕೃಷ್ಣರು ಗಂಗಾನದಿಯನ್ನು ಬ್ರಹ್ಮವಾರಿ, ಅಂದರೆ ನೀರಿನ ರೂಪದಲ್ಲಿರುವ ಬ್ರಹ್ಮ ಎಂದು ಕರೆಯುತ್ತಿದ್ದರು. ಗಂಗಾ ತಟದಲ್ಲಿ ವಾಸವಾಗಿರುವ ಯಾವುದೇ ವ್ಯಕ್ತಿಯ ಹೃದಯ ಪರಿ ವರ್ತನೆಗೊಂಡು, ಅವನಲ್ಲಿ ಸದ್ಗುಣಗಳು ಪ್ರಕಟವಾಗುತ್ತವೆ ಎನ್ನು ವುದು ಅವರ ನಂಬಿಕೆಯಾಗಿತ್ತು. ಯಾರಾದರೂ ಪ್ರಾಪಂಚಿಕ ವಿಷಯಗಳು ಬಗ್ಗೆ ಹೆಚ್ಚು ಮಾತನಾಡಿದರೆ ಅವರಿಗೆ ಗಂಗಾಜಲ ವನ್ನು ಸೇವಿಸಲು ಹೇಳುತ್ತಿದ್ದರು. ಶ್ರೀರಾಮಕೃಷ್ಣರಿಗೆ ಗಂಗಾ ಮಾತೆಯು ದೇವತೆಯ ರೂಪದಲ್ಲಿ ದರ್ಶನವನ್ನು ಅನುಗ್ರಹಿಸಿ ದ್ದಳು. ಅವರು ತಮ್ಮ ಭಕ್ತರಿಗೆ ಗಂಗಾಸ್ನಾನವನ್ನು ಮಾಡುವಂತೆ ಪ್ರೋತ್ಸಾಹಿಸುತ್ತ, ಗಂಗೆ ಎಲ್ಲ ಪಾಪಗಳನ್ನೂ ತೆಗೆದುಹಾಕುತ್ತಾಳೆ ಎನ್ನುತ್ತಿದ್ದರು.

ಶ್ರೀಮಾತೆ ಶಾರದಾದೇವಿಯವರು ಗಂಗೆಯ ಮೇಲೆ ಅಪಾರ ವಾದ ಭಕ್ತಿ-ಶ್ರದ್ಧೆಯನ್ನು ಹೊಂದಿದ್ದರು. ಅವರು ಬೆಳಗ್ಗೆ ಎದ್ದ ತಕ್ಷಣ ಗಂಗಾ, ಗಾಯತ್ರೀ ಎಂದು ಮೆಲ್ಲನೆ ಪಠಿಸುತ್ತಿದ್ದರು. ದಕ್ಷಿಣೇಶ್ವರದಲ್ಲಿದ್ದಾಗ ಒಂದು ದಿನವೂ ತಪ್ಪದೆ ಗಂಗಾಸ್ನಾನ ಮಾಡುತ್ತಿದ್ದರು.

ಸ್ವಾಮಿ ವಿವೇಕಾನಂದರಿಗೂ ಗಂಗಾಮಾತೆಯ ಮೇಲೆ ಅತ್ಯ ಪಾರವಾದ ಶ್ರದ್ಧೆಯಿತ್ತು. ಅವರು ಪಾಶ್ಚಾತ್ಯ ದೇಶಗಳಿಗೆ ಹೋಗು ವಾಗ ಗಂಗಾಜಲವನ್ನೂ ಜೊತೆಗೆ ಕೊಂಡೊಯ್ದಿದ್ದರು. ಅವರಿಗೆ ಬೇಕೆನಿಸಿದಾಗ ಕೆಲವು ಹನಿಗಳಷ್ಟು ಗಂಗಾಜಲವನ್ನು ಸೇವಿಸು ತ್ತಿದ್ದರು. ಆಗ ಅವರಲ್ಲಾಗುತ್ತಿದ್ದ ಬದಲಾವಣೆಯನ್ನು ಕುರಿತು ಹೀಗೆ ವಿವರಿಸುತ್ತಾರೆ; ''ಗಂಗಾಜಲವನ್ನು ಸೇವಿಸಿದ ತಕ್ಷಣವೇ ಆ ಪಾಶ್ಚಾತ್ಯ ಜನಸ್ರೋತ, ನಾಗರಿಕತೆಯ ಕಲಹ, ಕೋಟಿ, ಕೋಟಿ ಮಾನವರ ಉನ್ಮಾದಪ್ರಾಯ ಕೋಲಾಹಲದ ನಡುವೆಯೂ ನನ್ನ ಮನಸ್ಸು ಶಾಂತವಾಗುತ್ತಿತ್ತು. ಆ ವಿಲಾಸ ಭೂಮಿ, ಅಮರಾವತಿ ಸದೃಶ ಪ್ಯಾರೀಸ್, ಲಂಡನ್, ನ್ಯೂಯಾರ್ಕ್, ಬರ್ಲಿನ್, ರೋಮ್ ಎಲ್ಲವೂ ಮಾಯವಾಗಿ, ಹರ ಹರ ಹರ ಎಂಬ ಧ್ವನಿಯೊಂದೇ ಕೇಳುತ್ತಿತ್ತು. ಹಿಮಾಲಯ ಪ್ರಾಂತ್ಯದ ಜನಶೂನ್ಯ ವಿಪಿನವೊಂದೇ ಕಾಣಿಸುತ್ತಿತ್ತು. ಆ ಪವಿತ್ರ ಸುರತರಂಗಿಣಿಯು ಹೃದಯ, ಬುದ್ಧಿ ಗಳಲ್ಲಿಯೂ, ದೇಹದ ನಾಳಗಳಲ್ಲಿಯೂ ಹರಿಯುತ್ತಾ , ಹರ ಹರ ಹರ ಎಂಬ ಸ್ವರ್ಗೀಯ ನಿನಾದಗೈಯುತ್ತಿರುವುದು ಕೇಳಿಬರು ತಿತ್ತು.''

ಪವಿತ್ರತೆಯ ಮೂರ್ತರೂಪರಾದ ದಿವ್ಯತ್ರಯರೇ ಗಂಗೆಯ ಕುರಿತು ಈ ಭಾವನೆ ಹೊಂದಿರುವಾಗ, ಗಂಗೆಯ ಆ ಪ್ರಾಂತ್ಯವನ್ನು ನಾವು ಕಲ್ಪಿಸಿಕೊಳ್ಳಲೂ ಆರೆವು. ಪ್ರತಿಯೊಬ್ಬ ಯಾತ್ರಿಕರು ಗಂಗೋತ್ರಿ ಯಲ್ಲಿನ ಗಂಗಾಜಲವನ್ನು ತೆಗೆದುಕೊಂಡು ಹೋಗುತ್ತಾರೆ. ಚಾರ್ ಧಾಮ್‌ಗಳಲ್ಲಿಯೇ ಅತ್ಯಂತ ಸ್ವಚ್ಛವಾದ ವಿಶಾಲವಾದ ಧಾಮ ಗಂಗೋತ್ರಿ. ಅಲ್ಲಿಯೇ ಸ್ವಲ್ಪಕಾಲ ಜಪ, ಪ್ರಾರ್ಥನೆಯನ್ನು ಸಲ್ಲಿಸಿ, ಅಲ್ಲಿನ ಪವಿತ್ರವಾದ ಗಂಗಾಜಲವನ್ನು ಒಂದು ಪಾತ್ರೆಯಲ್ಲಿ ಶೇಖ ರಿಸಿಕೊಂಡು ಉತ್ತರಕಾಶಿಯಿಂದ ಕೇದಾರದ ಕಡೆಗೆ ನಮ್ಮ ಪ್ರಯಾಣವನ್ನು ಮುಂದುವರಿಸಿದೆವು.

**ಕೇದಾರನಾಥ:** ಪ್ರತಿವರ್ಷ ಲಕ್ಷಾಂತರ ಯಾತ್ರಿಕರು ಕೈಗೊ ಳ್ಳುವ ಕೇದಾರನಾಥ ತೀರ್ಥಯಾತ್ರೆಗೆ ಅದರದೇ ಆದ ಒಂದು ರೋಮಾಂಚಕಾರಿ ವೈಶಿಷ್ಟ್ಯವಿದೆ. ಕೇದಾರನಾಥ ಧಾಮವಿರು ವುದು ಸಮುದ್ರಮಟ್ಟದಿಂದ ೧೧,೭೫೦ ಅಡಿ ಎತ್ತರದ ರುದ್ರ- ಪ್ರಶಾಂತ ಸೌಂದರ್ಯದ ಮಡಿಲಲ್ಲಿ, ಹಿಮವತ್ಪರ್ವತದ ಒಡ ಲಲ್ಲಿ. ಇಲ್ಲಿಯ ಪ್ರಕೃತಿ ಸೌಂದರ್ಯ ಪ್ರಪಂಚದಲ್ಲೇ ಅಪೂರ್ವ ವಾದದ್ದು. ಗೌರೀಕುಂಡದಿಂದ ಕೇದಾರನಾಥ ಯಾತ್ರೆಗೆ ಹೋಗುವ ದಾರಿಯಲ್ಲಿ ದೇಶದ ಎಲ್ಲ ರಾಜ್ಯಗಳಿಂದ ಬಂದಿರುವ ಸಾವಿರಾರು ಸ್ತ್ರೀ-ಪುರುಷ-ವೃದ್ಧ-ಬಾಲಕರನ್ನು ನಾವು ಕಾಣಬಹುದು. ಅವರ

ವಿಶಿಷ್ಟವಾದ ಉಡುಗೆ-ತೊಡುಗೆಗಳು, ಅನೇಕ ಸಂಪ್ರದಾಯಗಳಿಗೆ ಸೇರಿದ ಸಂನ್ಯಾಸಿಗಳು, ಕುದುರೆ-ಡೋಲಿ-ಕಾಲ್ನಡಿಗೆಯಲ್ಲಿ ಪ್ರಯಾಣಿಸುತ್ತಿರುವ ಯಾತ್ರಿಕರು, ವಿವಿಧ ಭಜನೆ ತಂಡಗಳು, ''ಹರ ಹರ ಮಹಾದೇವ'' - ''ಭಂ ಭಂ ಭೋಲೇ'' ಎಂಬ ಘೋಷಣೆ ಗೈಯುತ್ತಿರುವ ಉತ್ಸಾಹಿ ಯುವಕಸಮೂಹ, ಅಲ್ಲಿ ಭೋರ್ಗರೆಯುತ್ತಿರುವ ಜಲಪಾತಗಳು, ರಭಸವಾಗಿ ಧುಮುಕುತ್ತಿರುವ ಮಂದಾಕಿನಿ ನದಿ, ಗಗನಚುಂಬಿಯಂತಿರುವ ಹಿಮಶಿಖರಗಳು, ರಾತ್ರಿಯ ವೇಳೆ ಶುಭ್ರ-ಸ್ವಚ್ಛವಾದ ಆಕಾಶದಲ್ಲಿ ಮಿನುಗುತ್ತಿರುವ ನಕ್ಷತ್ರಗಳು, ಅಲ್ಲಲ್ಲಿ ಬೆಳಗುತ್ತಿರುವ ವಿದ್ಯುದ್ದೀಪಗಳು-ಒಟ್ಟಿನಲ್ಲಿ ಅದೊಂದು ಬೇರೆಯೇ ಲೋಕ, ಬೇರೆಯೇ ಅನುಭವ. ಯಾವ ಕಲಾವಿದನ ಕುಂಚವನ್ನೂ ನಾಚಿಸುವ ಸೋಲಿಸುವ ಅದ್ಭುತ ಚಿತ್ರಣ. ನಮ್ಮ ಮನಸ್ಸನ್ನು ಮುದಗೊಳಿಸಿ ಅತ್ಯಂತ ಸಹಜವಾಗಿ ಸ್ಥಿರಗೊಳಿಸಿ ಧ್ಯಾನಲೀನವಾಗಿಸುವ ಪ್ರಕೃತಿಮಾತೆಯ ವಿಶೇಷ ಶಕ್ತಿ .

ಉತ್ತರಕಾಶಿಯಿಂದ ಟೆಹರಿ, ಶ್ರೀನಗರ ಮಾರ್ಗವಾಗಿ ರುದ್ರಪ್ರಯಾಗವನ್ನು ತಲುಪಿ, ಅಲ್ಲಿಂದ ಮುಂದೆ ಗೌರೀಕುಂಡ ಎಂಬ ಸ್ಥಳವನ್ನು ಸೇರಿದೆವು. ಯಾತ್ರಿಕರ ವಾಹನಗಳು ಇಲ್ಲಿಯವರೆಗೆ ಮಾತ್ರ ಬರುತ್ತವೆ. ಮುಂದಿನ ದಾರಿಯನ್ನು ಕಾಲ್ನಡಿಗೆಯಲ್ಲಿಯೇ ಕ್ರಮಿಸಬೇಕು. ಗೌರೀಕುಂಡದಲ್ಲಿ ಬಿಸಿನೀರಿನ ಬುಗ್ಗೆಯಿದೆ. ಅಲ್ಲಿ ಶುಚಿರ್ಭೂತರಾಗಿ ಸ್ವಲ್ಪ ಸಮಯ ವಿಶ್ರಾಂತಿಯನ್ನು ಪಡೆದು ಕೇದಾರನಾಥ ಧಾಮಕ್ಕೆ ಹೊರಟೆವು.

ಗೌರೀಕುಂಡದಿಂದ ಕೇದಾರ ೧೬ ಕಿ.ಮೀ. ದೂರದಲ್ಲಿದೆ. ಇಲ್ಲಿನ ರಸ್ತೆ ತಕ್ಕಮಟ್ಟಿಗೆ ವಿಶಾಲವಾಗಿದ್ದು ಸಿಮೆಂಟಿನಿಂದ ತಯಾರಿಸಿದ್ದಾರೆ. ಆದ್ದರಿಂದ ನಡೆಯಲು ಅಷ್ಟೇನೂ ಕಷ್ಟವಾಗದು. ದಾರಿ ಚೆನ್ನಾಗಿದ್ದರೂ ಎತ್ತರವಾದ ಮಾರ್ಗದಲ್ಲಿ ನಡೆಯುತ್ತಲೇ ಹೋಗಬೇಕಾಗುತ್ತದೆ. ಅದಲ್ಲದೇ ಇಲ್ಲಿನ ವಾತಾವರಣ ತುಂಬಾ ವೈಪರೀತ್ಯದಿಂದ ಕೂಡಿದ್ದು ಕೇವಲ ೧೦ ನಿಮಿಷಗಳಲ್ಲಿಯೇ ಸ್ವಲ್ಪ ಬಿಸಿಲು, ನಂತರ ಮಳೆ, ಅನಂತರ ಮೈಕೊರೆಯುವ ಚಳಿ, ಕೊನೆಗೆ ಹಿಮಪರ್ವತಗಳಿಂದ ಹಿಮಗಾಳಿ ಬೀಸುತ್ತಲೇ ಇರುತ್ತದೆ. ಈ ವೈಪರೀತ್ಯವನ್ನು ಸ್ವಲ್ಪ ತಾಳ್ಮೆಯಿಂದ ಸಹಿಸಿಕೊಂಡರೆ ಪ್ರಕೃತಿಯ ವೈವಿಧ್ಯತೆಯನ್ನು ಚೆನ್ನಾಗಿ ಆಸ್ವಾದಿಸಬಹುದು. ದಾರಿಯುದ್ದಕ್ಕೂ ಅಂಗಡಿಗಳು, ಹೋಟೆಲುಗಳು, ಪ್ರಯಾಣಕ್ಕೆ ಬೇಕಾಗುವ ಕೆಲವು ಉಪಯುಕ್ತವಾದ ವಸ್ತುಗಳು ದೊರೆಯುತ್ತವೆ. ೬ ಕಿ.ಮೀ. ದೂರ ನಡೆದ ಮೇಲೆ 'ರಾಮಬಾರ' ಎಂಬ ಸ್ಥಳ ತಲುಪುತ್ತೇವೆ. ಅಲ್ಲಿ ಸ್ವಲ್ಪ ಉಪಹಾರವನ್ನು ಸೇವಿಸಿ ಮತ್ತೆ ನಡೆಯಲು ಪ್ರಾರಂಭಿಸಿದೆವು. ಕೇದಾರ ಇನ್ನು ೪ ಕಿ.ಮೀ. ದೂರವಿರುವಾಗ 'ಗೌರಚಟ್ಟಿ' ಎಂಬ ಸ್ಥಳವಿದೆ. ರಾತ್ರಿ ಅಲ್ಲಿಯೆ ಉಳಿದುಕೊಂಡೆವು. ಅಲ್ಲಿ ಅದೆಂತಹ ಚಳಿಯೆಂದರೆ ರಕ್ತ ಹೆಪ್ಪುಗಟ್ಟುವಂತಹ ಅನುಭವ! ನಮ್ಮ ದೇಹದ ಉಷ್ಣತೆಯಿಂದ ಮಾತ್ರವೇ ಅಲ್ಲಿರುವ ಹಾಸಿಗೆ-ಹೊದಿಕೆಗಳು ಸ್ವಲ್ಪ ಬಿಸಿಯಾಗಬೇಕು. ಭಗವಂತನ ನಾಮಸ್ಮರಣೆ ಮಾಡುತ್ತ ರಾತ್ರಿ ೧೨ ಗಂಟೆಗೆ ನಿದ್ರೆಗೆ ಜಾರಿದೆವು. ಬೆಳಗಿನ ಜಾವ ಬೇಗನೆ ಎದ್ದು ಪ್ರಾತರ್ವಿಧಿಗಳನ್ನು ಮುಗಿಸಿಕೊಂಡು ಅಲ್ಲಿನ ಹೋಟೆಲ್‌ನಲ್ಲಿ ಬಿಸಿ ಬಿಸಿ ಚಹಾ ಹಾಗೂ ಬಿಸ್ಕತ್ತುಗಳನ್ನು ಸೇವಿಸಿದ ನಂತರವೇ ನಮ್ಮ ಪ್ರಯಾಣ ಮುಂದುವರಿಯಿತು.

ಸ್ವಲ್ಪ ದೂರ ಕ್ರಮಿಸಿದ ಮೇಲೆ ಸೂರ್ಯೋದಯವಾಗುತ್ತಲೇ ಒಂದು ಜಾಗದಲ್ಲಿ ಕೇದಾರೇಶ್ವರ ದೇಗುಲದ ಗೋಪುರವನ್ನು ಕಾಣುತ್ತೇವೆ. ಇಷ್ಟೊಂದು ಶ್ರಮಪಟ್ಟು ನಡೆದು ಬರುವ ಭಕ್ತರು ಗೋಪುರವನ್ನು ಕಂಡೊಡನೆ, ಹರ್ಷೋಲ್ಲಾಸದಿಂದ 'ಹರ ಹರ ಮಹಾದೇವ', 'ಕೇದಾರನಾಥ ಕೀ ಜೈ' ಎಂಬ ಘೋಷಣೆಯೊಂದಿಗೆ ಭಕ್ತಿಯಿಂದ ಬಾಗಿ ಬಾಗಿ ನಮಿಸುತ್ತಾರೆ. ಇನ್ನೂ ಸ್ವಲ್ಪ ದೂರ ನಡೆದ ಮೇಲೆ ವಿಶಾಲವಾದ ಬಯಲಿನಂತಹ ಪ್ರದೇಶ ಸಿಗುವುದು. ಅನತಿ ದೂರದಲ್ಲಿಯೇ ವಸತಿ ಗೃಹಗಳು, ಅಂಗಡಿ ಮುಗ್ಗಟ್ಟುಗಳು ಇರುವ ಸ್ಥಳವೇ ಕೇದಾರನಾಥ ಧಾಮ. ಮಂದಾಕಿನಿ ನದಿಯ ಮೇಲಿರುವ ಸೇತುವೆಯನ್ನು ದಾಟಿ ಒಂದು ರಸ್ತೆಯ ಮಾರ್ಗದಲ್ಲಿ ಮುಂದೆ ಸಾಗಿದರೆ ಕೇದಾರೇಶ್ವರ ದೇವಸ್ಥಾನ ಕಾಣಿಸುತ್ತದೆ. ದೇವಸ್ಥಾನದ ಹತ್ತಿರ ಬಂದಂತೆಲ್ಲ ನಮ್ಮ ಆಯಾಸ ದೂರವಾಗಿ ಮನಸ್ಸು ಭಕ್ತಿಭಾವದಿಂದ ರಂಜಿತವಾಗುತ್ತದೆ.

ಕೇದಾರೇಶ್ವರ ಮಂದಿರ ಎತ್ತರವಾದ ಸ್ಥಳದಲ್ಲಿ ಕಲ್ಲಿನಿಂದ ಕಟ್ಟಲ್ಪಟ್ಟಿದ್ದು ವಿಶಿಷ್ಟವಾದ ವಾಸ್ತುಶಿಲ್ಪದಿಂದ ಕಂಗೊಳಿಸುತ್ತಿದೆ. ಇದನ್ನು ಕಟ್ಟಿಸಿದವರು ಪಾಂಡವರು ಎನ್ನಲಾಗಿದೆ. ದೇವಸ್ಥಾನದ ಪ್ರಾಂಗಣದ ಸುತ್ತಲೂ ಕಲ್ಲು ಚಪ್ಪಡಿಯನ್ನು ಹಾಕಿಸಿದ್ದಾರೆ. ದೇವಾಲಯ ಹಿಂದುಗಡೆ ಆಗಸದೆತ್ತರಕ್ಕೆ ಹರಡಿಕೊಂಡಿರುವ ಗಂಭೀರವಾದ ರಮಣೀಯವಾದ ಹಿಮಪರ್ವತಗಳಿವೆ. ದೇವಸ್ಥಾನದ ಒಳಗಡೆ ನಾಲ್ಕು ಗೋಡೆಗಳಲ್ಲಿ ಪಾಂಡವರ, ದ್ರೌಪದಿಯ, ಶ್ರೀಕೃಷ್ಣನ ಕಲ್ಲಿನ ವಿಗ್ರಹಗಳಿವೆ. ಗರ್ಭಮಂದಿರದಲ್ಲಿ ಹಿಮಾಲಯ ಪರ್ವತಶ್ರೇಣಿಗಳಂತೆ ಹಾಗೂ ವೃಷಭದ ಬೆನ್ನಿನಾಕಾರದ ಪವಿತ್ರ 'ಶಾಂತಂ ಶಿವಂ ಅದ್ವೈತಂ' ಆದ ಶಿವಲಿಂಗವಿದೆ. ಅಭಿಷೇಕಕ್ಕೆ ಮೊದಲು ಪ್ರಾತಃಕಾಲ ಅವನನ್ನು ತುಪ್ಪದಿಂದ ಅಲಂಕರಿಸುತ್ತಾರೆ. ಅದರ ಎದುರಿನಲ್ಲಿಯೇ ಎತ್ತರದ ನಂದಿ ಮೂರ್ತಿ. ದಕ್ಷಿಣ ಭಾರತ ಶೈಲಿಯಲ್ಲಿರುವ ದೇವಾಲಯದ ಅರ್ಚಕರು, ಕರ್ನಾಟಕದ ವೀರಶೈವ ಸಂಪ್ರದಾಯಕ್ಕೆ ಸೇರಿದ ಪಂಚಾಚಾರ್ಯ ಪಂಗಡದವರು. ದೇವಾಲಯದ ಪರಮ ಪವಿತ್ರವಾದ ಪ್ರಶಾಂತವಾದ ವಾತಾವರಣ ಅಲೌಕಿಕವಾದದ್ದು. ಆಧ್ಯಾತ್ಮಿಕ ತರಂಗಗಳಿಂದ ನಿರಂತರವಾಗಿ ಸ್ಪಂದಿಸುವಂಥದ್ದು. ಕೇದಾರೇಶ್ವರನ ದರ್ಶನವನ್ನು ಪಡೆದು ಅಲ್ಲಿನ ಪ್ರಾಂಗಣದಲ್ಲಿ ಸ್ವಲ್ಪಕಾಲ ಜಪ-ಧ್ಯಾನ-ಪ್ರಾರ್ಥನೆಯಲ್ಲಿ ತಲ್ಲೀನರಾದೆವು. ಕೇದಾರದಿಂದ ಗೌರೀಕುಂಡದವರೆಗೂ ಕಾಲ್ನಡಿಗೆಯಲ್ಲಿಯೇ ಕ್ರಮಿಸಿ, ರಾತ್ರಿ ಗುಪ್ತಕಾಶಿಯಲ್ಲಿ ಉಳಿದೆವು.

**ಬದರೀನಾಥ:** ಗುಪ್ತಕಾಶಿಯಲ್ಲಿ ಪುರಾತನವಾದ ಶಿವ-ಪಾರ್ವತಿಯರ ಮಂದಿರವಿದೆ. ಅಲ್ಲಿಯ ದರ್ಶನವನ್ನು ಪಡೆದು ಬದರೀನಾಥ ಧಾಮದ ಕಡೆ ನಮ್ಮ ಪ್ರಯಾಣ ಮುಂದುವರಿಯಿತು. ಗುಪ್ತಕಾಶಿಯಿಂದ ತಿಲಾವಾರ ಮಾರ್ಗವಾಗಿ ರುದ್ರಪ್ರಯಾಗ ತಲುಪಿದೆವು. ಇದು ಬದರಿ ಕೇದಾರ ಮಾರ್ಗಗಳು ಒಟ್ಟುಗೂಡುವ ಸ್ಥಳ. ಕೇದಾರದಿಂದ ಹರಿದು ಬರುವ ಮಂದಾಕಿನಿ ಇಲ್ಲಿ ಅಲಕನಂದೆಯನ್ನು ಸೇರುತ್ತಾಳೆ. ಅಲ್ಲಿಂದ ಮುಂದೆ ಸಿಗುವುದು ಕರ್ಣಪ್ರಯಾಗ. ಅಲ್ಲಿ ಪಿಂಡಾರ್ ಎಂಬ ಹೊಳೆ ಅಲಕನಂದಾವನ್ನು ಕೂಡುವುದು.

ಕರ್ಣಪ್ರಯಾಗದಿಂದ ೨೨ ಕಿ.ಮೀ. ದೂರ ಬಂದರೆ ಇನ್ನೊಂದು ಪ್ರಯಾಗ ಸಿಗುತ್ತದೆ. ಅದೇ ನಂದಪ್ರಯಾಗ. ನಂದಪ್ರಯಾಗದಿಂದ ತಿರುವಾದ ಅಂಕುಡೊಂಕಿನ ರಸ್ತೆಯ ಮೂಲಕ ೬೪ ಕಿ.ಮೀ. ದೂರದಲ್ಲಿ ಜೋಷಿಮಠವಿದೆ. ಇಲ್ಲಿ ಶಂಕರಾಚಾರ್ಯರು ಪ್ರತಿಷ್ಠಾಪಿಸಿದ ಜ್ಯೋತಿರ್ಮಠವಿದೆ. ಚಳಿಗಾಲದಲ್ಲಿ ಬದರೀನಾಥ ಕ್ಷೇತ್ರ ಮುಚ್ಚಿದಾಗ ೬ ತಿಂಗಳು ಕಾಲ ಶ್ರೀಬದರೀನಾರಾಯಣ ಪೂಜೆಗೊಳ್ಳುವುದು ಇಲ್ಲಿಯೇ. ಜೋಷಿಮಠದಿಂದ ೪೫ ಕಿ.ಮೀ. ಅತಿ ದುರ್ಗಮವಾದ ರಸ್ತೆಯ ಮೂಲಕ ಬಂದರೆ ಬದರೀನಾಥ ಧಾಮವನ್ನು ತಲುಪಬಹುದು. ಇದು ಸಮುದ್ರಮಟ್ಟದಿಂದ ೧೦, ೫೦೦ ಅಡಿ ಎತ್ತರದಲ್ಲಿದೆ.

ಬದರೀನಾಥ ಕ್ಷೇತ್ರದಲ್ಲಿಯೇ ನರ-ನಾರಾಯಣರು ತಪಸ್ಸು ಮಾಡಿದ್ದು. ಶಂಕರಾಚಾರ್ಯರು ತಮ್ಮ ತೀವ್ರವಾದ ತಪಸ್ಸಿನಿಂದ ವ್ಯಾಸಮಹರ್ಷಿಗಳ ದರ್ಶನವನ್ನು ಪಡೆದು, ಉಪನಿಷತ್ತು-ಬ್ರಹ್ಮ ಸೂತ್ರಗಳಿಗೆ ಭಾಷ್ಯ ಬರೆದಿದ್ದು ಇಲ್ಲಿಯೇ. ಬದರೀ ಕ್ಷೇತ್ರದಲ್ಲಿ ಅಲಕನಂದಾ ನದಿ ಬಹಳ ರಭಸವಾಗಿ ಹರಿಯುತ್ತದೆ. ಅದರ ಎಡ ದಂಡೆಯ ಮೇಲೆ ಭವ್ಯವಾದ ಗೋಪುರವುಳ್ಳ ವಿಶಾಲವಾದ ಬದರೀನಾಥನ ಮಂದಿರವಿದೆ. ಮಂದಿರದ ಪಕ್ಕದಲ್ಲಿಯೇ 'ತಪ್ತಕುಂಡ' ಎಂಬ ಬಿಸಿನೀರಿನ ಬುಗ್ಗೆಯಿದೆ. ಸಹಸ್ರಾರು ಸಂಖ್ಯೆಯಲ್ಲಿ ಯಾತ್ರಿಕರು ಬದರೀನಾಥನ ದರ್ಶನಕ್ಕಾಗಿ ಸಾಲಾಗಿ ಕಾತರತೆಯಿಂದ ಕಾಯುತ್ತಿರುತ್ತಾರೆ. ಹಲವು ಕಲ್ಲಿನ ಮೆಟ್ಟಿಲುಗಳನ್ನು ಹತ್ತಿ ದೇಗುಲಕ್ಕೆ ಹೋಗಬೇಕು. ಗರ್ಭಮಂದಿರದಲ್ಲಿ ಸುಂದರವಾದ ಬದರೀನಾಥ ವಿಗ್ರಹದ ಜೊತೆಗೆ, ನರ-ನಾರಾಯಣರ ಮೂರ್ತಿಗಳೂ ಇವೆ. ಬದರೀಕ್ಷೇತ್ರದ ಅರ್ಚಕರು ಕೇರಳದ ನಂಬೂದರಿ ಬ್ರಾಹ್ಮಣರು. ಅವರನ್ನು 'ರಾವಲ್‌ಜೀ' ಎಂದು ಕರೆಯುತ್ತಾರೆ. ಇಲ್ಲಿ ಬದರೀನಾಥನಿಗೆ ಶಾಸ್ತ್ರೋಕ್ತವಾಗಿ ಪೂಜೆಯನ್ನು ಮಾಡುತ್ತಾರೆ. ಬದರೀನಾಥನ ದರ್ಶನವನ್ನು ಪಡೆದು, ಸ್ವಲ್ಪ ಸಮಯ ಹೃತ್ಪೂರ್ವಕವಾಗಿ ಜಪ-ಪ್ರಾರ್ಥನೆಯಲ್ಲಿ ನಿರತರಾದೆವು.

ಬದರೀನಾಥ ಧಾಮದಿಂದ ಜೋಷೀಮಠದಲ್ಲಿ ಬರುವ 'ಭಾರತ ಸೇವಾಶ್ರಮ'ದಲ್ಲಿ ರಾತ್ರಿ ಉಳಿದುಕೊಂಡು, ದೇವಪ್ರಯಾಗ, ಹೃಷೀಕೇಶ ಮಾರ್ಗವಾಗಿ ಹರಿದ್ವಾರಕ್ಕೆ ಬಂದು ಬಂದು ತಲುಪಿದೆವು. ಭಗವಂತನ ಕೃಪೆಯಿಂದ ಚಾರ್‌ಧಾಮ್ ಯಾತ್ರೆ ಪೂರ್ಣಗೊಳಿಸಿದಾಗ ನಮ್ಮಲ್ಲಿ ಏನೋ ಒಂದು ತರಹ ಧನ್ಯತಾ ಭಾವ, ಕೃತಜ್ಞತಾ ಭಾವನೆ. ಹರಿದ್ವಾರದಿಂದ ಕಾಶಿಗೆ ತೆರಳಿ ಅಲ್ಲಿ ವಿಶ್ವನಾಥ-ಅನ್ನಪೂರ್ಣೆಯರ ದರ್ಶನವನ್ನು ಪಡೆದು ನಮ್ಮ ಸ್ವಸ್ಥಳಗಳಿಗೆ ಹಿಂದಿರುಗಿದೆವು. ತೀರ್ಥಕ್ಷೇತ್ರಗಳಲ್ಲಿ ಅನುಭವಿಸಿದ ಪವಿತ್ರತೆ, ಭಗವತ್ಸಾನ್ನಿಧ್ಯ, ಶರಣಾಗತಿ ಮನೋಭಾವನೆ-ಪ್ರತಿನಿತ್ಯವೂ ಆಸ್ವಾದಿಸುವಂತಾದರೆ ನಮ್ಮ ಯಾತ್ರೆ ನಿಜವಾದ ಅರ್ಥದಲ್ಲಿ ಸಾರ್ಥಕವಾದಂತೆ. ಚಾರ್‌ಧಾಮ್ ಯಾತ್ರೆಗೆ ನಮ್ಮ ಅನಂತ ನಮಸ್ಕಾರಗಳು. ❇


ಸರ್. ಎಂ.ವಿ. ಪದವಿ ಪೂರ್ವ ಕಾಲೇಜು
ಹದಡಿ ರಸ್ತೆ, ದಾವಣಗೆರೆ - 577 005 ಫೋನ್ : 08192-261200

ಸರ್.ಎಂ.ವಿ. ಪದವಿ ಪೂರ್ವ ಕಾಲೇಜು ವತಿಯಿಂದ ಇದುವರೆಗೆ ಸಾವಿರಾರು ವಿದ್ಯಾರ್ಥಿಗಳು ವೈದ್ಯಕೀಯ (ಮೆಡಿಕಲ್) ಇಂಜಿನೀಯರಿಂಗ್‌ನಂತಹ ವೃತ್ತಿಪರ ಕೋರ್ಸ್‌ಗಳಿಗೆ ಆಯ್ಕೆಯಾಗಿದ್ದಾರೆ. ಅದರಲ್ಲೂ ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆಗಳೇ ಹೆಚ್ಚು, ಪ್ರಸ್ತುತ 2021-22ನೇ ಶೈಕ್ಷಣಿಕ ವರ್ಷದಲ್ಲಿ ನಮ್ಮ ಕಾಲೇಜಿನಿಂದ 200 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹೆಸರಾಂತ ವೈದ್ಯಕೀಯ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶ ಪಡೆಯಲಿದ್ದಾರೆ. ಅದರಲ್ಲಿ ಕೆಲವು ವಿದ್ಯಾರ್ಥಿಗಳು ಪ್ರವೇಶ ಪಡೆದ ಕಾಲೇಜುಗಳ ಮಾಹಿತಿ ಹೀಗಿವೆ.

* ಸಾಯಿತೇಜ - ಎ.ಐ.ಐ.ಎಂ.ಎಸ್ - ಮಧುರೈ
* ಪ್ರಜ್ವಲ್ ಬಿ.ಬಿ. - ಎ.ಐ.ಐ.ಎಂ.ಎಸ್ - ಬೀಬಿನಗರ
* ಮನೋಜ್ ಬಿ.ಎ. - ಎ.ಐ.ಐ.ಎಂ.ಎಸ್ - ಮಂಗಳಗಿರಿ
* ರೋಹಿತ್ ಆರ್.ಜೆ. - ಎ.ಐ.ಐ.ಎಂ.ಎಸ್ - ದೆಹಲಿ
* ವಿನಯ್ ಕುಮಾರ್ - ಎ.ಐ.ಐ.ಎಂ.ಎಸ್ - ನಾಗಪುರ
* ಸಾಹಿ ಸಂಜಯ್ - ಜೆ.ಐ.ಪಿ.ಎಂ.ಇ.ಆರ್ - ಪಾಂಡಿಚೇರಿ
* ಯದುನಂದನ - ಜೆ.ಐ.ಪಿ.ಎಂ.ಇ.ಆರ್ - ಪಾಂಡಿಚೇರಿ

ಹಾಗೆಯೇ ಭಾರತೀಯ ತಂತ್ರಜ್ಞಾನ ಸಂಸ್ಥೆಗಳಲ್ಲಿ ಕೂಡ (ಐ.ಐ.ಟಿ.) ನಮ್ಮ ಕಾಲೇಜಿನಿಂದ ಅನೇಕ ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ. ಅವುಗಳಲ್ಲಿ ಕೆಲವು ವಿದ್ಯಾರ್ಥಿಗಳ ಮಾಹಿತಿ ಹೀಗಿದೆ.

* ಧೀರಜ್ ಹೆಚ್.ಜೆ. - ಐ.ಐ.ಟಿ. - ದೆಹಲಿ
* ಶಶಾಂಕ ಹೆಚ್. - ಐ.ಐ.ಟಿ. - ಖರಗ್‌ಪುರ್ (ಪಶ್ಚಿಮ ಬಂಗಾಳ)
* ಕವನ ಎಸ್. - ಐ.ಐ.ಟಿ. - ಗೋವಾ
* ಅಭಿಷೇಕ್ ಎಂ. - ಎನ್.ಐ.ಟಿ. - ಸುರತ್ಕಲ್ (ಕರ್ನಾಟಕ)
* ಲೋಚನ ಎಂಎಸ್. - ಎನ್.ಐ.ಟಿ. - ಸುರತ್ಕಲ್ (ಕರ್ನಾಟಕ)
* ಯಶವಂತ್ ಕೆ.ಆರ್.- ಎನ್.ಐ.ಟಿ. - ಸುರತ್ಕಲ್ (ಕರ್ನಾಟಕ)
* ಲಲಿತ್ ವಿ. - ಎನ್.ಐ.ಟಿ. - ಸುರತ್ಕಲ್ (ಕರ್ನಾಟಕ)
* ಮನಿಷಾ ಡಿ.ವಿ. - ಎನ್.ಐ.ಟಿ. - ಸುರತ್ಕಲ್ (ಕರ್ನಾಟಕ)
* ಸೂರಜ್ ಕೊಪ್ಪದ್ - ಎನ್.ಐ.ಟಿ. - ಸುರತ್ಕಲ್ (ಕರ್ನಾಟಕ)
* ಉತ್ತಮ್ ಹಂಸರಾಜ್- ಐ.ಐ.ಐ.ಟಿ. - ಬೆಂಗಳೂರು (ಕರ್ನಾಟಕ)
* ಅಂಕಿತ್ ಎಂ. - ಐ.ಐ.ಐ.ಟಿ. - ಜಬಲ್‌ಪುರ - (ಮಧ್ಯಪ್ರದೇಶ್)
* ಅಭಯ್ ವಿ. ಜೋಶಿ - ಐ.ಐ.ಐ.ಟಿ. - ಜಬಲ್‌ಪುರ - (ಮಧ್ಯಪ್ರದೇಶ್)